# ನವಿಲುಗನ್ನಡಿ

- ನವೆಂಬರ್ ಸಂಚಿಕೆಯ ಪುಟ್ಟ ಕನ್ನಡಾಂಬೆಯ ಮುಖಪುಟ ಮುದ್ದಾಗಿದೆ. ಮಕ್ಕಳ ಮತ್ತು ಕನ್ನಡ ಭಾಷೆಯ ಕುರಿತ ಬರಹಗಳು ಗಮನ ಸೆಳೆದವು. 'ಜನರ ಕಷ್ಟ ಸುಖಗಳೊಂದಿಗೆ ನಾನು ಬೆರೆತು ಹೋಗಿರುವೆ…'– ವಿಜಯಾ ಅವರ ಎದೆಯಾಳದ ಮಾತುಕತೆ (ಸಂದರ್ಶನ: ಡಾ. ಎಂ.ಎಸ್. ಆಶಾದೇವಿ) ಮನೋಜ್ಞವಾಗಿದೆ. ಮಕ್ಕಳ ದಿನದ ವಿಶೇಷ ಸಂದರ್ಶನಗಳು ಸಂಚಿಕೆಗೆ ಕಿರೀಟಪ್ರಾಯ.

**ಬಿ.ಆರ್. ಅಣ್ಣಾಸಾಗರ, ಸೇಡಂ**




- ನವಂಬರ್ ಸಂಚಿಕೆಯ ಸುಂದರ ಮುಖಪುಟ ಕುಳಿತಲ್ಲೇ ನರ್ತಿಸುವಂತೆ ಮಾಡಿತು. ಕಥೆಗಳು, ಲೇಖನಗಳು ಮನಾಕರ್ಷಕವಾಗಿವೆ. ಪುಟ ಬಂಗಾರ ಓದಿ ಕಣ್ಣಾಲಿಗಳು ತುಂಬಿಬಂದವು. ಕನ್ನಡ ವಿವೇಕ ತೂಕವಾದ ಲೇಖನ.

**ಸುಮನಾ, ಬೆಂಗಳೂರು**

- 'ಕನ್ನಡ ತಿಂಗಳು, ಮಕ್ಕಳು ಬೆಳುದಿಂಗಳು' ಕನ್ನಡ ರಾಜ್ಯೋತ್ಸವದ ಈ ಸಂದರ್ಭದಲ್ಲಿ ಅತ್ಯಂತ ಸಮಯೋಚಿತ ಸಂಚಿಕೆ. ಮಕ್ಕಳ ಮನಸ್ಸನ್ನು ಪರಿಣಾಮಕಾರಿಯಾಗಿ ಕನ್ನಡ ಮನಸಾಗಿಸುವುದು ಹೇಗೆ ಎಂಬುದು ನಮ್ಮ ಮುಂದಿರುವ ಬಹು ದೊಡ್ಡ ಸವಾಲು.

**ಶಂಕರನಾರಾಯಣ ಭಟ್, ಹೊನ್ನಾವರ**

- ಸಿ.ಎನ್. ರಾಮಚಂದ್ರನ್ ಅವರ ಬರಹ 'ಕೃಷ್ಣಭಕ್ತ ಮುಸ್ಲಿಂ ಕವಿಗಳು' ವಿಶಿಷ್ಟವಾಗಿತ್ತು. ಕಾಶ್ಮೀರಿ ಕಥೆ 'ಬೇರುಗಳು' (ಮೂಲ: ಅವತಾರ್ ಕೃಷ್ಣ 'ರಹಬರ್', ಕನ್ನಡಕ್ಕೆ: ಡಿ.ಎನ್. ಶ್ರೀನಾಥ್) ಮುದನೀಡಿತು.

**ತಾರಾನಾಥ ಪಿ.ಕೆ., ಅರಸೀಕೆರೆ**

- ಸಿಡ್ನಿ ಶ್ರೀನಿವಾಸರ ಕಥೆ 'ಸ್ಯಾಮ್ ತಾರಾ ಮದುವೆ' ಮನಸ್ಸಿಗೆ ನಾಟುತ್ತದೆ.

**ಸಚ್ಚಿದಾನಂದ ಮೂರ್ತಿ, ಬೆಂಗಳೂರು**

- ತುಂಬಾಡಿ ರಾಮಯ್ಯ ಅವರ 'ಕುರುಕ್ಷೇತ್ರ' ಉತ್ತಮ ಕಥೆ. ಭಾಷಾ ಪ್ರಯೋಗ, ಗ್ರಾಮೀಣ ನುಡಿಗಟ್ಟುಗಳು ಹಾಗೂ ವಸ್ತುವಿನ ದೃಷ್ಟಿಯಿಂದ ವಿಶಿಷ್ಟವಾಗಿದೆ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- 'ಮಕ್ಕಳಿಸ್ಕೂಲು ಜಾನಪದದಲ್ಲಲ್ವೇ?' ಎಸ್.ಜಿ. ಸಿದ್ಧರಾಮಯ್ಯ ಅವರ ಲೇಖನ ಆಪ್ಯಾಯಮಾನ. ಕುಮಾರ ಚಲ್ಯ ಅವರ 'ಬಿಲಗಳು' ಕವಿತೆ ಓದುತ್ತಲೆ ಥಟ್ಟನೆ ಹಿಡಿದು ನಿಲ್ಲಿಸುತ್ತದೆ.

**ಪ್ರಕಾಶ್ ಮಲ್ಕಿಒಡೆಯರ್, ಹೂವಿನ ಹಡಗಲಿ**

- ಯಕ್ಷ ಕಲಾವಿದನೊಬ್ಬನ ಬದುಕು ಬವಣೆಯ ಚಿತ್ರಣ ನೀಡಿದ ಇಂದುಚೇತನ ಬೋರುಗುಡ್ಡೆ ಅವರ ಕಥೆ 'ರಂಗ ಕುಬೇರ' ಓದಿ ಮುಗಿಸುತ್ತಿದ್ದಂತೆ ಕಣ್ಣು ಹನಿಗೂಡಿದವು.

**ಪಿ.ಜಯವಂತ ಪೈ, ಕುಂದಾಪುರ,**
**ತಾರಾ ಹೆಗಡೆ, ಶಿರಸಿ**

- ಪುರುಷೋತ್ತಮ ಬಿಳಿಮಲೆ ಅವರ 'ಪಸರಿಪ ಕನ್ನಡಕ್ಕೆ ಒಡೆಯನೋರ್ವನೆ ಪಂಪನಾವಗಂ' ಹಾಗೂ 'ಕೃಷ್ಣಭಕ್ತ ಮುಸ್ಲಿಂ ಕವಿಗಳು' ಲೇಖನಗಳು ಸಂಗ್ರಹಯೋಗ್ಯವಾಗಿವೆ.

**ಆರ್. ಮಣಿ, ಮೈಸೂರು,**
**ಆರ್.ಕೆ. ಮಿಜಾರ್, ಮೂಡುಬಿದರೆ**